

# ಸಿನಿಮಾ ಎರಡು-ಪ್ರೀತಿಯ ಕಥೆ ಮೂರು

'ಲವ್ ಡೇಸ್' ಸಿನಿಮಾ ಬಿಡುಗಡೆಗೆ ಮುನ್ನವೇ ಗೌರವ್ ಅರೋರಾ ಮತ್ತು ಕೃತಿ ಸನೊನ್ ಪ್ರೇಮಗೀತೆ ಕುರಿತು ಬಿಟೌನ್‌ನಲ್ಲಿ ಗುಸುಗುಸು ಕೇಳಿಬರುತ್ತಿತ್ತು. ಇಬ್ಬರೂ ಮಾಡೆಲಿಂಗ್ ಲೋಕದಲ್ಲಿ ಒಟ್ಟಿಗೆ ಕಾಣಿಸಿಕೊಂಡವರು. ಬಳಿಕ ಜತೆಗೇ ಸಿನಿಮಾಕ್ಕೆ ಕಾಲಿರಿಸಿದರು. ಹೀಗಾಗಿ ಅದು ಬರಿಯ ವದಂತಿಯಾಗಿರಲು ಸಾಧ್ಯವೇ ಇಲ್ಲ ಎನ್ನಲಾಗಿತ್ತು. ಆದರೆ ಅದೆಲ್ಲಾ ಸುಳ್ಳು. ತಮ್ಮಿಬ್ಬರ ನಡುವೆ ಅಂತಹದ್ದೇನೂ ನಡೆದೇ ಇಲ್ಲ. ವಾಸ್ತವವಾಗಿ ಕೃತಿಯೊಂದಿಗೆ ತಾನು ಸಂಪರ್ಕದಲ್ಲಿಯೇ ಇಲ್ಲ ಎಂದು ಹೇಳಿಕೊಂಡಿದ್ದಾನೆ ಗೌರವ್. ಮಿಗಿಲಾಗಿ ಅದರಿಂದ ತನಗೆ ಅತಿಯಾದ ನೋವಾಗುತ್ತಿದೆ ಎಂದು ಬೇಸರಪಟ್ಟುಕೊಂಡಿದ್ದಾನೆ.

ತಮ್ಮಿಬ್ಬರ ಪ್ರೀತಿಯ ಬಗ್ಗೆ ಪದೇ ಪದೇ ಬರೆಯುತ್ತಲೇ ಇದ್ದಾರೆ. ಈ ರೀತಿ ಮತ್ತೆ ಮತ್ತೆ ಊಹಿಸಿ ಇಲ್ಲದ್ದನ್ನು ಬರೆಯುವುದು ನೋವುಂಟುಮಾಡುತ್ತದೆ. ಕೃತಿ ಅಥವಾ ಬೇರೆ ಯುವತಿಯೊಂದಿಗೆ ಸಂಪರ್ಕವಿದೆ ಎಂದೆಲ್ಲಾ ಮಾತನ್ನಾಡುವುದು ಬೇಸರ ಮೂಡಿಸುತ್ತದೆ. ತಾವಿಬ್ಬರೂ ಒಟ್ಟಿಗೆ ಮಾಡೆಲಿಂಗ್ ಮಾಡಿದ್ದು, ಆ ಕಾರಣಕ್ಕಾಗಿಯೇ ಇಬ್ಬರ ನಡುವೆ ಏನೋ ಇದೆ ಎನ್ನಲಾಗುತ್ತಿದೆ ಎಂದು ನೋವು ಹಂಚಿಕೊಂಡಿದ್ದಾನೆ ಗೌರವ್. 'ಎರಡು ಸಿನಿಮಾ ಮಾಡಿದ್ದೇನಷ್ಟೇ. ಈಗಲೇ ಮೂರು ಪ್ರೀತಿ ಪ್ರೇಮದ ಕಥೆಗಳು ನನ್ನ ಸುತ್ತ ಹೆಣೆದಿವೆ. ಆದರೆ ಕೆಟ್ಟ ವಾಸ್ತವ ಏನೆಂದರೆ, ಮೊದಲ ಸಿನಿಮಾ ಮಾಡಲು ನನಗೆ 10 ವರ್ಷ ಬೇಕಾಯಿತು. ಸಾಕಷ್ಟು ಪರಿಶ್ರಮ ಮತ್ತು ತಿರಸ್ಕಾರಗಳೊಂದಿಗೆ ಸಾಗಿದ್ದೇನೆ. ಅಂತಿಮವಾಗಿ ಸಿನಿಮಾಕ್ಕೆ ಹೇಗೋ ಕಾಲಿಟ್ಟಾದ ಜನರು ಈ ರೀತಿ ಮಾತನಾಡಲು ಶುರುಮಾಡುತ್ತಾರೆ. ಇಂತಹ ವದಂತಿಗಳು ನಮ್ಮ ಪರಿಶ್ರಮವನ್ನೆಲ್ಲವನ್ನೂ ಕಿತ್ತುಕೊಳ್ಳುತ್ತದೆ' ಎಂದು ರೂಮರ್ ಕುರಿತು ಸಿಟ್ಟಿನಿಂದ ಹೇಳಿದ್ದಾನೆ ಗೌರವ್.



# ಇನ್ನೂ ಬಾಲಿವುಡ್‌ಗೆ ಫಿಟ್ ಆಗಿಲ್ಲ!

ಇಮೇಜ್ ಬದಲಿಸಿಕೊಳ್ಳುವ ಸಾಹಸಕ್ಕಿಳಿದ ಸನ್ನಿ ಲಿಯೋನ್ ಬಾಲಿವುಡ್‌ಗೆ ಕಾಲಿಟ್ಟು ನಾಲ್ಕು ವರ್ಷವೇ ಕಳೆದಿದೆ. ಒಂದಷ್ಟು ಸಿನಿಮಾಗಳಲ್ಲಿ ನಟಿಸಿದ್ದರೂ ಸನ್ನಿಗೆ ತನ್ನ ಹೆಸರು ಮತ್ತು ದೇಹ ಪ್ರದರ್ಶನದಿಂದ ಗೆಲುವು ಮಾತ್ರ ಸಿಕ್ಕಿಲ್ಲ. ತಾನಿನ್ನೂ ಬಾಲಿವುಡ್‌ಗೆ ಫಿಟ್ ಆಗಿಲ್ಲ ಎಂಬ ಅನಿಸಿಕೆ ಆಕೆಯಲ್ಲಿ ಮೂಡಿದೆ.

ತಾನು ಹೊರಗಿನಿಂದ ಬಂದವಳು ಎಂಬ ಭಾವನೆ ಆಕೆಯಲ್ಲಿ ಇನ್ನೂ ಇದೆ. 'ಹೊಸದಾಗಿ ಚಿತ್ರರಂಗಕ್ಕೆ ಕಾಲಿಟ್ಟ ಯಾರಿಗೇ ಆದರೂ ಅಂತಹ ಭಾವನೆ ಇರುವುದು ಸಹಜ. ಬಾಲಿವುಡ್‌ಗೆ ಸಂಪೂರ್ಣವಾಗಿ ಸೂಕ್ತಳಾಗಿದ್ದೇನೆ ಎಂದು ನನಗೆ ಈಗಲೂ ಅನಿಸುತ್ತಿಲ್ಲ' ಎಂದಿದ್ದಾಳೆ ಸನ್ನಿ.

ಆದರೆ ತನ್ನೊಂದಿಗೆ ಚಿತ್ರರಂಗಕ್ಕೆ ಬಂದ ಇತರೆ ನಟಿಯರಿಗೆ ಹೋಲಿಸಿದರೆ ಸಾಕಷ್ಟು ಬೆಳೆದಿರುವ ಅನಿಸಿಕೆಯೂ ಆಕೆಯಲ್ಲಿ ಮೂಡಿದೆ. ಇಲ್ಲಿ ಕೆಟ್ಟ ಮತ್ತು ಒಳ್ಳೆಯ ಗಳಿಗೆಗಳ ಎರಡೂ ಬಗೆಯ ಅನುಭವಗಳು ಆಕೆಗೆ ಆಗಿವೆಯಂತೆ. ಅದರ ಜತೆಯಲ್ಲಿಯೇ ಉತ್ತಮ ಬೆಂಬಲವೂ ಸಿಗುತ್ತಿದೆ ಎಂದಿದ್ದಾಳೆ.

ಶಾರೂಖ್, ಅಮೀರ್ ಖಾನ್‌ರಂತಹ ನಟರೊಂದಿಗೆ ನಟಿಸಿದರೆ ತನ್ನ ಇಮೇಜು ಬದಲಾಗಬಹುದು ಎನ್ನುವುದು ಆಕೆಯ ಅಭಿಪ್ರಾಯ. ಅದರ ಮೊದಲ ಹೆಜ್ಜೆಯಾಗಿ 'ರಯೀಸ್' ಚಿತ್ರದಲ್ಲಿ 1980ರಲ್ಲಿ ಬಂದ 'ಖುರ್ಬಾನಿ' ಚಿತ್ರದ ಜನಪ್ರಿಯ ಹಾಡು 'ಲೈಲಾ ಓ ಲೈಲಾ'ದ ಹೊಸ ಅವತರಣಿಕೆಯಲ್ಲಿ ಆಕೆ ಶಾರೂಖ್ ಜತೆ ಕುಣಿಯಲಿದ್ದಾಳೆ. ಹಾಗೆಯೇ ಅಮೀರ್ ಮತ್ತು ಸಲ್ಮಾನ್ ಜತೆಗೂ ಕಾಣಿಸಿಕೊಳ್ಳಬೇಕು ಎಂಬ ಆಸೆಯನ್ನು ಮತ್ತೆ ವ್ಯಕ್ತಪಡಿಸಿದ್ದಾಳೆ ಸನ್ನಿ.